# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1042
ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 24.02.2023
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ನಗರಸಭಾ ವ್ಯಾಪ್ತಿಯ ಪೊಲೀಸ್ ಸ್ಟೇಷನ್ ಎದುರಿನ ಮುಖ್ಯ ರಸ್ತೆಯಲ್ಲೇ ಸೀಜ್ ಮಾಡಲಾದ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಉಳ್ಳಾಲ ಪೊಲೀಸ್ ಠಾಣಾ ಪ್ರಕರಣಗಳಲ್ಲಿ ಸೀಜ್ ಮಾಡಲಾದ ವಾಹನಗಳನ್ನು ಠಾಣಾ ಆವರಣದಲ್ಲಿ ನಿಲ್ಲಿಸಲು ಸಾಕಷ್ಟು ಸ್ಥಳಾವಕಾಶ ಇಲ್ಲದ ಕಾರಣ ಅಕ್ರಮ ಮರಳುಗಾರಿಕೆಗೆ ಸಂಬಂಧಪಟ್ಟಂತೆ ಸೀಜ್ ಮಾಡಿದ ಕೆಲವು ವಾಹನಗಳನ್ನು ಮಾತ್ರ ಠಾಣಾ ಕಟ್ಟಡದ ಬಳಿ ಇರುವ ರಸ್ತೆಯ ಒಂದು ಬದಿಯಲ್ಲಿ ಸಾರ್ವಜನಿಕ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಆಗದ ರೀತಿಯಲ್ಲಿ ಇರಿಸಲಾಗಿರುತ್ತದೆ. |
| (ಆ) | ಹಾಗಿದ್ದಲ್ಲಿ, ಪೊಲೀಸ್ ಸ್ಟೇಷನ್ ಎದುರು ಮುಖ್ಯರಸ್ತೆಯ ಸಂಚಾರಕ್ಕೆ ಅಡಚಣೆ, ಸಾರ್ವಜನಿಕ ಪಾದಚಾರಿಗಳಿಗೆ ಓಡಾಡಲು ಅನಾನುಕೂಲ. ವಾಹನಗಳಿಂದ ಅಪಾಯ ಇತ್ಯಾದಿ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು; | ➢ ಉಳ್ಳಾಲ ಪೊಲೀಸ್ ಠಾಣೆಯ ವಿವಿಧ ಪ್ರಕರಣಗಳಲ್ಲಿ ಸೀಜ್ ಮಾಡಿದ ವಾಹನಗಳನ್ನು ವಿಲೇವಾರಿ ಮಾಡಲು ಮಾನ್ಯ ನ್ಯಾಯಾಲಯದಿಂದ ಆದೇಶವಾಗಲು ಬಾಕಿ ಇದ್ದು, ಆದೇಶ ಸ್ವೀಕೃತವಾದ ಕೂಡಲೇ ವಾಹನಗಳನ್ನು ವಿಲೇವಾರಿ ಮಾಡಲಾಗುವುದು.<br>➢ ಸೀಜ್ ಮಾಡಿದ ವಾಹನಗಳನ್ನು ಇರಿಸಲು ಪೊಲೀಸ್ ಠಾಣಾ ಆವರಣದಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲದ ಕಾರಣ ಹತ್ತಿರದಲ್ಲಿ ಲಭ್ಯವಿರುವ ಸೂಕ್ತ ಸರ್ಕಾರಿ ಜಾಗವನ್ನು ಗುರುತಿಸಿಕೊಡುವಂತೆ ತಾಲ್ಲೂಕು ಆಡಳಿತ ಮತ್ತು ನಗರ ಸಭೆಯನ್ನು ಕೋರಲಾಗಿರುತ್ತದೆ. |
| (ಇ) | ಸದರಿ ಮುಖ್ಯ ರಸ್ತೆಯಲ್ಲಿ ಹಲವು ಶಾಲೆಗಳಿದ್ದು, ವಿಧ್ಯಾರ್ಥಿಗಳ ಓಡಾಟಕ್ಕೆ ಸುರಕ್ಷತೆಗೆ ಕೈಗೊಳ್ಳುವ ಕ್ರಮಗಳೇನು; | ಉಳ್ಳಾಲ ಪೊಲೀಸ್ ಠಾಣಾ ಪ್ರಕರಣದಲ್ಲಿ ಸ್ವಾಧೀನಪಡಿಸಿದ ಕೆಲವು ವಾಹನಗಳನ್ನು ಮಾತ್ರ ಠಾಣಾ ಕಟ್ಟಡದ ಬಳಿ ಇರುವ ರಸ್ತೆಯ ಒಂದು ಬದಿಯಲ್ಲಿ ಸಾರ್ವಜನಿಕ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆ ಆಗದ ರೀತಿಯಲ್ಲಿ ಇರಿಸಲಾಗಿದ್ದು, ಸದರಿ ವಾಹನಗಳಿಂದಾಗಿ ವಿದ್ಯಾರ್ಥಿಗಳ ಓಡಾಟಕ್ಕೆ ಯಾವುದೇ ತೊಂದರೆ ಉಂಟಾಗುವುದಿಲ್ಲ. |
| (ಈ) | ಎಫ್‌ಫುಡ್, ಮೀನು ಲಾರಿಗಳನ್ನು ಅಲ್ಲೇ ನಿಲ್ಲಿಸುತ್ತಿರುವುದರಿಂದ ದುರ್ನಾತ, ಆರೋಗ್ಯದ ಸಮಸ್ಯೆ ಇತ್ಯಾದಿಗಳ ನಿವಾರಣೆಗೆ ಸರ್ಕಾರ ಯಾವಾಗ ಮುಂದಾಗುವುದು? | ಉಳ್ಳಾಲ ಪೊಲೀಸ್ ಠಾಣಾ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಯಾವುದೇ ಎಫ್‌ಫುಡ್, ಮೀನು ಲಾರಿಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುವುದಿಲ್ಲ. ಅಕ್ರಮ ಮರಳು ಸಾಗಾಟಕ್ಕೆ ಸಂಬಂಧಪಟ್ಟಂತೆ ಸೀಜ್ ಮಾಡಿದ ವಾಹನಗಳನ್ನು ಮಾತ್ರ ಇರಿಸಲಾಗಿರುತ್ತದೆ. |

ಹೆಚ್‌ಡಿ 93 ಎಸ್‌ಎಸ್‌ಟಿ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಪೂರಕ ಟಿಪ್ಪಣಿ

**ಕಳೆದ ಮೂರು ವರ್ಷಗಳಲ್ಲಿ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸ್ವಾಧೀನ ಪಡಿಸಿಕೊಂಡ ಮತ್ತು ವಿಲೇವಾರಿ ಮಾಡಿದ ವಾಹನಗಳ ವಿವರ ಈ ಕೆಳಕಂಡಂತಿದೆ.**

| ವರ್ಷ | ಸ್ವಾಧೀನಪಡಿಸಿದ ಒಟ್ಟು ವಾಹನಗಳ ಸಂಖ್ಯೆ | ವಾರಸುದಾರರಿಗೆ ಬಿಡುಗಡೆಗೊಳಿಸಿದ ವಾಹನಗಳ ಸಂಖ್ಯೆ | ವಿಲೇವಾರಿ ಮಾಡಲು ಬಾಕಿ ಇರುವ ವಾಹನಗಳ ಸಂಖ್ಯೆ | |
|---|---|---|---|---|
| | | | ವಿಲೇವಾರಿ ಮಾಡಲು ಬಾಕಿ ಇರುವ ವಾಹನಗಳಲ್ಲಿ ಠಾಣಾ ಆವರಣದಲ್ಲಿ ಇರಿಸಿದ ವಾಹನಗಳ ಸಂಖ್ಯೆ | ಠಾಣಾ ಕಟ್ಟಡದ ಬಳಿಯ ರಸ್ತೆ ಬದಿಯಲ್ಲಿ ನಿಲ್ಲಿಸಿದ ವಾಹನಗಳ ಸಂಖ್ಯೆ |
| 2020 | 104 | 96 | 04 | 04 |
| 2021 | 122 | 90 | 28 | 04 |
| 2022 | 105 | 75 | 28 | 02 |
| 2023 (31–01–2023 ರವರೆಗೆ ) | 02 | 01 | 01 | – |